ಶ್ರೀಮನ್ಮಧ್ವಾಚಾರ್ಯರ ಮೂಲಗ್ರಂಥಗಳ ಮಾಲಿಕೆಯಲ್ಲಿ

ಸಂಕೀರ್ಣ ಗ್ರಂಥಗಳು

(ಅಣುಭಾಷ್ಯ, ದ್ವಾದಶಸ್ತೋತ್ರ, ಜಯಂತೀನಿರ್ಣಯ, ಶ್ರೀಕಂದುಕಸ್ತುತಿ,
ಶ್ರೀಕೃಷ್ಣಾಮೃತಮಹಾರ್ಣವ, ನಖಸ್ತುತಿ, ತಂತ್ರಸಾರ, ಯಮಕಭಾರತ, ಕರ್ಮನಿರ್ಣಯ, ಸದಾಚಾರಸ್ಮೃತಿ)

ಕನ್ನಡ ಟೀಕಾ ಭಾಷಾಂತರ

ವೇದಮೂರ್ತಿ ದ್ವೈತವೇದಾಂತವಾಚಸ್ಪತಿ
ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳು

Scanned by CamScanner

॥ ಶ್ರೀಮಧ್ವನಾಥೋ ವಿಜಯತೇ ॥

ಶ್ರೀಮನ್ಮಧ್ವಾಚಾರ್ಯರ

ಮೂಲಗ್ರಂಥಗಳ ಮಾಲಿಕೆಯಲ್ಲಿ

ಸಂಕೀರ್ಣ ಗ್ರಂಥಗಳು

(ಅಣುಭಾಷ್ಯ, ದ್ವಾದಶಸ್ತೋತ್ರ, ಜಯಂತೀನಿರ್ಣಯ, ಶ್ರೀಕಂದುಕಸ್ತುತಿ,
ಶ್ರೀಕೃಷ್ಣಾಮೃತಮಹಾರ್ಣವ, ನಖಸ್ತುತಿ, ತಂತ್ರಸಾರ, ಯಮಕಭಾರತ,
ಕರ್ಮನಿರ್ಣಯ, ಸದಾಚಾರಸ್ಮೃತಿ)

ದ್ವೈತವೇದಾಂತವಿದ್ವಾನ್, ದ್ವೈತವೇದಾಂತಶಿರೋಮಣಿ ವೇದಾಂತವಾಚಸ್ಪತಿ,
ಉಡುಪಿ ಸಂಸ್ಕೃತಮಹಾಪಾಠಶಾಲಾನಿವೃತ್ತ ವೇದಾಂತಪ್ರಾಚಾರ್ಯ

ದಿ॥ ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳಿಂದ

ರಚಿತವಾದ ಕನ್ನಡ ಟೀಕಾ ಭಾಷಾಂತರ ಸಹಿತ

ಪ್ರಕಾಶಕರು

ಶ್ರೀಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ
ಶ್ರೀಶ್ರೀಪಾದರಾಜಮಠ, ಮುಳಬಾಗಿಲು

Scanned by CamScanner

|| ಶ್ರೀಃ ||

ಜಯಂತೀ ನಿರ್ಣಯವು

ಶ್ರೀಮದ್ಧನುಮದ್ಭೀಮ ಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ
ಲಕ್ಷ್ಮೀಹಯಗ್ರೀವಾಯ ನಮಃ || ಹರಿಃ ಓಂ ||

ಮೂಲ || ರೋಹಿಣ್ಯಾಮರ್ಧರಾತ್ರೇ ತು ಯದಾ ಕಾಲಾಷ್ಟಮೀ ಭವೇತ್ ।
ಜಯಂತೀನಾಮ ಸಾ ಪ್ರೋಕ್ತಾ ಸರ್ವಪಾಪಪ್ರಣಾಶ (ನಂ)ನೀ || ೧ ||

ಅರ್ಥ || ಯದಾ=ಯಾವಾಗ, ಕಾಲಾಷ್ಟಮೀ=ಕೃಷ್ಣಪಕ್ಷದ ಅಷ್ಟಮಿಯು, ಅಂದರೆ ಸಿಂಹಮಾಸದ ಕೃಷ್ಣಪಕ್ಷದ ಅಷ್ಟಮಿಯು, ಅಥವಾ ಶ್ರಾವಣಮಾಸದ ಕೃಷ್ಣಪಕ್ಷದ ಅಷ್ಟಮಿಯು, ಅರ್ಧ ರಾತ್ರೇ ತು=ಅರ್ಧರಾತ್ರಿಕಾಲದಲ್ಲಿ ಆದರೂ, ರೋಹಿಣ್ಯಾಂ=ರೋಹಿಣೀ ನಕ್ಷತ್ರದಿಂದ ವ್ಯಾಪ್ತವಾದು ದಾಗಿ, ಅಥವಾ ರೋಹಿಣಿ ನಕ್ಷತ್ರವಿರಲು, ಭವೇತ್=ಆಗುವುದೋ, ಸರ್ವಪಾಪಪ್ರಣಾಶಿನೀ=ಎಲ್ಲಾ ಪಾಪ ಗಳನ್ನೂ, ಚೆನ್ನಾಗಿ ನಾಶಮಾಡತಕ್ಕ, ಸಾ=ಆ ಕೃಷ್ಣಾಷ್ಟಮಿಯು, ಜಯಂತೀ ನಾಮ= ಜಯಂತಿಯೆಂದು, ಪ್ರೋಕ್ತಾ=ಹೇಳಲ್ಪಟ್ಟಿದೆ. || 1 ||

ಮೂಲ || ಯಸ್ಯಾಂ ಜಾತೋ ಹರಿಃ ಸಾಕ್ಷಾನ್ನಿಶೀಥೇ ಭಗವಾನಜಃ ।
ತಸ್ಮಾತ್ತದ್ದಿನಮತ್ಯಂತಂ(ತ್ಯರ್ಥಂ) ಪುಣ್ಯಂ ಪಾಪಹರಂ ಪರಂ || ೨ ||

ಅರ್ಥ || ಯಸ್ಯಾಂ=ಯಾವ ಕೃಷ್ಣಾಷ್ಟಮೀ ತಿಥಿಯಲ್ಲಿ, ಅಜಃ=ಉತ್ಪತ್ಯಾದಿಗಳಿಲ್ಲದಿರುವ, ಸಾಕ್ಷಾತ್=ಮುಖ್ಯವಾಗಿ, ಹರಿಃ=ಶತ್ರು ಸಂಹಾರಕನಾದ ಶ್ರೀಕೃಷ್ಣನು, ನಿಶೀಥೇ=ಅರ್ಧರಾತ್ರಿಕಾಲದಲ್ಲಿ, ಜಾತಃ=ಅವತರಿಸಿರುವನೋ, ತಸ್ಮಾತ್=ಆದಕಾರಣ, ತತ್=ಆ, ದಿನಂ=ದಿವಸವು, ಅತ್ಯಂತಂ (ಅತ್ಯರ್ಥಂ)=ಅತಿಶಯವಾಗಿ, ಪುಣ್ಯಂ=ಪುಣ್ಯಪ್ರದವಾದುದು, ಪಾಪಹರಂ=ಸರ್ವಪಾಪ ಪರಿಹಾರಕವು, ಪರಂ=ಸರ್ವೋತ್ಕೃಷ್ಟವು. || 2 ||

ಮೂಲ || ತಸ್ಮಾತ್ಸರ್ವೈರುಪೋಷ್ಯಾ ಸಾ ಜಯಂತೀನಾಮ ವೈ ಸದಾ ।
ದ್ವಿಜಾತಿಭಿರ್ವಿಶೇಷೇಣ ತದ್ಭಕ್ತೈಶ್ಚ ವಿಶೇಷತಃ (ವಿಧಾನತಃ) || ೩ ||

ಅರ್ಥ || ತಸ್ಮಾತ್=ಆದುದರಿಂದ, ಸರ್ವೈಃ=ಸಮಸ್ತರಿಂದಲೂ, ಜಯಂತೀ ನಾಮ=ಜಯಂತಿ ಯೆಂದು ಪ್ರಸಿದ್ಧವಾದ, ಸಾ=ಆ ಕೃಷ್ಣಾಷ್ಟಮಿಯು, ಸದಾ=ಯಾವಾಗಲೂ, ವೈ=ನಿಶ್ಚಯವಾಗಿಯೂ, ಉಪೋಷ್ಯಾ=ಉಪವಾಸ ಮಾಡಲ್ಪಡಬೇಕು. ದ್ವಿಜಾತಿಭಿಃ=ಬ್ರಾಹ್ಮಣರಿಂದ, ವಿಶೇಷೇಣ=ವಿಶೇಷಾಕಾರ ವಾಗಿ, ಉಪೋಷ್ಯಾ=ಉಪವಾಸಮಾಡಲ್ಪಡಬೇಕು. ತದ್ಭಕ್ತೈಶ್ಚ=ವಿಷ್ಣುಭಕ್ತರಿಂದಲಾದರೂ, ವಿಶೇಷತಃ= ಅತಿವಿಶೇಷವಾಗಿ, (ವಿಧಾನತಃ=ವಿಧಿಪೂರ್ವಕವಾಗಿ) ಉಪೋಷ್ಯಾ=ಉಪವಾಸಮಾಡಲ್ಪಡಲೇಬೇಕು. || 3 ||

ಮೂಲ || ಯೋ ಭುಂಕ್ತೇ ತದ್ದಿನೇ ಮೋಹಾ (ಲೋಭಾ) ತ್ಪಾಯಶೋಣಿತಮತ್ತಿ ಸಃ ।
ತಸ್ಮಾದುಪವಸೇತ್ಪುಣ್ಯಂ ತದ್ದಿನಂ ಶ್ರದ್ಧಯಾನ್ವಿತಃ || ೪ ||

Scanned by CamScanner

ಅರ್ಥ ॥ ತದ್ದಿನೇ=ಆ ದಿವಸದಲ್ಲಿ ಯಃ=ಯಾವಾತನು, ಮೋಹಾತ್=ಅಜ್ಞಾನದಿಂದ, ಭುಂಕ್ತೇ=ಭೋಜನಮಾಡುತ್ತಾನೋ, ಸಃ=ಆತನು, ಪೂಯ=ರೆಸಿಗೆ, ಶೋಣಿತಂ=ರಕ್ತವೂ ಇವುಗಳನ್ನು ಅತ್ತಿ=ತಿನ್ನುತ್ತಾನೆ. (ರೆಸಿಗೆ ರಕ್ತ ಇವುಗಳ ಭಕ್ಷಣದಂತೆಯೇ ಆದಿನ ಭೋಜನವೂ ಅತಿಗರ್ಹ್ಯವು. ಆದಕಾರಣ ಎಷ್ಟು ಮಾತ್ರಕ್ಕೂ ಆ ದಿನ ಭೋಜನಮಾಡಬಾರದು.) ತಸ್ಮಾತ್= ಆದಪ್ರಯುಕ್ತ, ಶ್ರದ್ಧಯಾ= ಆಸ್ತಿಕ್ಯಬುದ್ಧಿಯಿಂದ, ಅನ್ವಿತಃ=ಕೂಡಿದವನಾಗಿ, ಪುಣ್ಯಂ= ಪುಣ್ಯಪ್ರದವಾದ, ತತ್=ಆ, ದಿನಂ= ದಿವಸದಲ್ಲಿ ಉಪವಸೇತ್=ಉಪವಾಸಮಾಡತಕ್ಕುದು. (ನಿರಾಹಾರಿಯಾಗಿರಬೇಕು) ॥ 4 ॥

ಮೂಲ ॥ ಕೃತ್ವಾ ಶೌಚಂ ಯಥಾನ್ಯಾಯಂ ಸ್ನಾನಂ ಕುರ್ಯಾದತಂದ್ರಿತಃ ।
ಪ್ರಭಾತಕಾಲೇ ಮೇಧಾವೀ ಯೋಗಾಯೇತಿ ಯಥಾವಿಧಿಃ ॥ ೫ ॥

ಅರ್ಥ ॥ ಮೇಧಾವೀ=ಜ್ಞಾನಿಯಾದವನು, ಪ್ರಭಾತಕಾಲೇ=ಬೆಳಗಿನ ಜಾಮದಲ್ಲಿ, ಯಥಾನ್ಯಾಯಂ=ಶಾಸ್ತ್ರಾನುಸಾರವಾಗಿ, ಶೌಚಂ=ಶೌಚಾಚಮನಾದಿಗಳನ್ನು, ಕೃತ್ವಾ=ಮಾಡಿ, ಯೋಗಾಯೇತಿ= 'ಯೋಗಾಯ ಯೋಗಪತಯೇ ಯೋಗೇಶ್ವರಾಯ ಯೋಗಸಂಭವಾಯ ಶ್ರೀಗೋವಿಂದಾಯ ನಮೋ ನಮಃ' ಎಂಬೀ ಮಂತ್ರವನ್ನು ಹೇಳಿ, ಯಥಾವಿಧಿ=ಶಾಸ್ತ್ರದಲ್ಲಿ ಹೇಳಿದ ಪ್ರಕಾರ, ಅತಂದ್ರಿತಃ= ಆಲಸ್ಯರಹಿತನಾದವನಾಗಿ, ಸ್ನಾನಂ=ಅವಗಾಹನ ಸ್ನಾನವನ್ನು, ಕುರ್ಯಾತ್=ಮಾಡಬೇಕು ॥ 5 ॥

ಮೂಲ ॥ ನಿತ್ಯಾಹ್ನಿಕಂ ಪ್ರಕುರ್ವೀತ ಭಗವಂತಮನುಸ್ಮರನ್ ।
★ಯೋಗಾಯ ಯೋಗಪತಯೇ ಯೋಗೇಶ್ವರಾಯ.
ಯೋಗಸಂಭವಾಯ, ಶ್ರೀಗೋವಿಂದಾಯ ನಮೋನಮಃ ॥ ೬ ॥

ಅರ್ಥ ॥ ಭಗವಂತಂ=ಶ್ರೀಕೃಷ್ಣನನ್ನು, ಅನುಸ್ಮರನ್=ಸ್ಮರಿಸುವವನಾಗಿ, ನಿತ್ಯಾಹ್ನಿಕಂ=ನಿತ್ಯಕರ್ಮಗಳನ್ನು ಪ್ರಕುರ್ವೀತ=ಮಾಡಬೇಕು. (ಯೋಗಾಯ=ಮೋಕ್ಷಸಾಧನನಾದ, ಯೋಗಪತಯೇ= ಯೋಗಗಳಿಗೂ ನಿಯಾಮಕನಾದ, ಯೋಗೇಶ್ವರಾಯ=ಸಮಾಧಿ ಯೋಗವುಳ್ಳ ಯೋಗಿಗಳಿಗೆ ನಿಯಾಮಕನಾದ, ಯೋಗಸಂಭವಾಯ - ಯೋಗಗಳಿಗೆ ಉತ್ಪಾದಕನಾದ, ಶ್ರೀಗೋವಿಂದಾಯ= ಶ್ರೀಗೋಪಾಲಕೃಷ್ಣನಿಗೋಸ್ಕರ, ನಮೋ ನಮಃ=ನಮಸ್ಕಾರವು) ॥ 6 ॥

ಮೂಲ ॥ ಮಧ್ಯಾಹ್ನಕಾಲೇ ಚ ಪುಮಾನ್ಸಾಯಂಕಾಲೇ ತ್ವತಂದ್ರಿತಃ ।
ಸ್ನಾಯೀತ ಪೂರ್ವಮಂತ್ರೇಣ ವಾಸುದೇವಮನುಸ್ಮರನ್ ॥ ೭ ॥

ಅರ್ಥ ॥ ಪುಮಾನ್=ಪುರುಷನು, ಮಧ್ಯಾಹ್ನಕಾಲೇ ಚ=ಮಧ್ಯಾಹ್ನ ಕಾಲದಲ್ಲಿಯೂ, ಅತಂದ್ರಿತಃ=ಆಲಸ್ಯ ರಹಿತನಾದವನಾಗಿ, ವಾಸುದೇವಂ=ವಸುದೇವ ಪುತ್ರನಾದ ಶ್ರೀಕೃಷ್ಣನನ್ನು, ಅನುಸ್ಮರನ್=ಸ್ಮರಿಸುವವನಾಗಿ, ಪೂರ್ವಮಂತ್ರೇಣ=''ಯೋಗಾಯೇತಿ'' ಎಂದು ಹಿಂದೆ ಹೇಳಿದ ಮಂತ್ರದಿಂದಲೇ ಸ್ನಾಯೀತ=ಸ್ನಾನಮಾಡತಕ್ಕದು. ॥ 7 ॥

★ ಈ ಚಿಹ್ನೆಗೊಳಗಿನ ಪಾಠವು ಶ್ರೀಹೃಷೀಕೇಶತೀರ್ಥ ಲಿಖಿತ ಸರ್ವಮೂಲ ಪುಸ್ತಕದಲ್ಲಿಯೂ ಶ್ರೀಸೋದಾ ವಾದಿರಾಜಮಠದ ಪ್ರಾಚೀನ ಸರ್ವಮೂಲ ಪುಸ್ತಕದಲ್ಲಿಯೂ ಕಾಣುವುದಿಲ್ಲ.

Scanned by CamScanner

ಮೂಲ ॥ ತತಃ ಪೂಜಾಂ ಪ್ರಕುರ್ವೀತ ವಿಧಿವತ್ಸುಸಮಾಹಿತಃ ।
ಯಜ್ಞಾಯೇತಿ ಚ ಮಂತ್ರೇಣ ಶ್ರದ್ಧಾಭಕ್ತಿಯುತಃ ಪುಮಾನ್ ॥ ೮ ॥

ಅರ್ಥ ॥ ತತಃ=ಆಮೇಲೆ, ಪುಮಾನ್=ಪುರುಷನು, ವಿಧಿವತ್=ಶಾಸ್ತ್ರದಲ್ಲಿ ಹೇಳಿದ ಪ್ರಕಾರ, ಸುಸಮಾಹಿತಃ=ಚೆನ್ನಾಗಿ ಸಮಾಧಾನಯುಕ್ತನಾಗಿ, ಶ್ರೀಹರಿಯಲ್ಲೇ ಮನಸ್ಸನ್ನು ಇಟ್ಟವನಾಗಿ, ಶ್ರದ್ಧಾಭಕ್ತಿಯುತಃ=ಆಸ್ತಿಕ್ಯಬುದ್ಧಿಯೂ ಮಾಹಾತ್ಮ್ಯಜ್ಞಾನಪೂರ್ವಕ ಸುದೃಢಸ್ನೇಹವೂ ಇವುಗಳಿಂದೊಡಗೂಡಿದವನಾಗಿ, ಯಜ್ಞಾಯೇತಿ ಚ ಮಂತ್ರೇಣ='★ಯಜ್ಞಾಯ ಯಜ್ಞಪತಯೇ, ಯಜ್ಞೇಶ್ವರಾಯ ಯಜ್ಞಸಂಭವಾಯ ಶ್ರೀಗೋವಿಂದಾಯ ನಮೋ ನಮಃ ' ಎಂಬ ಮಂತ್ರದಿಂದ, ವಿಧಿವತ್=ವಿಧಿ ಪ್ರಕಾರ, ಪೂಜಾಂ=ಪೂಜೆಯನ್ನು, ಪ್ರಕುರ್ವೀತ=ಮಾಡಬೇಕು ॥ 8 ॥

ಮೂಲ ॥ ಕೃಷ್ಣಂ ಚ ಬಲಭದ್ರಂ ಚ ವಸುದೇವಂ ಚ ದೇವಕೀಂ ।
ನಂದಗೋಪಂ ಯಶೋದಾಂ ಚ ಸುಭದ್ರಾಂ ತತ್ರ ಪೂಜಯೇತ್ ॥ ೯ ॥

ಅರ್ಥ ॥ ಕೃಷ್ಣಂ ಚ=ಶ್ರೀಕೃಷ್ಣನನ್ನು, ಬಲಭದ್ರಂ ಚ=ಬಲರಾಮನನ್ನು, ವಸುದೇವಂ ಚ= ವಸುದೇವನನ್ನು, ದೇವಕೀಂ=ದೇವಕೀದೇವಿಯನ್ನು, ನಂದಗೋಪಂ=ನಂದಗೋಪನನ್ನು, ಯಶೋದಾಂ=ಯಶೋದೆಯನ್ನು, ಸುಭದ್ರಾಂ ಚ=ಸುಭದ್ರಾದೇವಿಯನ್ನೂ ಕೂಡ, ತತ್ರ=ಅಲ್ಲಿ ಪೂಜಯೇತ್=(ವಿಧಿಪ್ರಕಾರ ಭಕ್ತಿಯಿಂದ) ಪೂಜಿಸಬೇಕು. ॥ 9 ॥

ಮೂಲ ॥ ಅರ್ಘ್ಯಂ ದತ್ವಾ ಸಮಭ್ಯರ್ಚ್ಯಾಭ್ಯುತ್ಥಿತೇ ಶಶಿಮಂಡಲೇ।
(ಅರ್ಘ್ಯಂ ದದ್ಯಾತ್ಸಮರ್ಚ್ಯಾಥಾಭ್ಯುದಿತೇ ಶಶಿ (ಸಮ)ಮಂಡಲೇ ॥
(ಜಾತಃ ಕಂಸವಧಾರ್ಥಾಯ ಭೂಭಾರೋತ್ತಾರಣಾಯ ಚ ।
ಕೌರವಾಣಾಂ ವಿನಾಶಾಯ ದೈತ್ಯಾನಾಂ ನಿಧನಾಯ ಚ ॥ ೧೦ ॥

ಪಾಂಡವಾನಾಂ ಹಿತಾರ್ಥಾಯ ಧರ್ಮಸಂಸ್ಥಾಪನಾಯ ಚ ।
ಗೃಹಾಣಾರ್ಘ್ಯಂ ಮಯಾ ದತ್ತಂ ದೇವಕ್ಯಾ ಸಹಿತೋ ಹರೇ ॥ ೧೧ ॥

ಅರ್ಥ ॥ ಶಶಿಮಂಡಲೇ=ಚಂದ್ರಮಂಡಲವು, ಅಭ್ಯುತ್ಥಿತೇ ಸತಿ=ಉದಯಿಸುವಾಗ, ಸಮಭ್ಯರ್ಚ್ಯ=ಭಕ್ತಿಪೂರ್ವಕವಾಗಿ ಪೂಜಿಸಿ, ಅರ್ಘ್ಯಂ=ಅರ್ಘ್ಯವನ್ನು, ದತ್ವಾ=ಕೊಟ್ಟು, (ಧ್ಯಾನಿಸಬೇಕು) (ಶಶಿಮಂಡಲೇ=ಚಂದ್ರಮಂಡಲವು, ಅಭ್ಯುದಿತೇ ಸತಿ=ಉದಯಿಸಿಕೊಂಡು ಬರುವಾಗ, ಸಮರ್ಚ್ಯ=ಭಕ್ತಿಪೂರ್ವಕವಾಗಿ ಪೂಜಿಸಿ, ಅರ್ಘ್ಯಂ=ಅರ್ಘ್ಯವನ್ನು, ದದ್ಯಾತ್=ಕೊಡಬೇಕು.) (ಹರೇಃ=ಶತ್ರುಗಳನ್ನು ಸಂಹರಿಸಿ ಭಕ್ತರನ್ನುದ್ಧರಿಸುವ ಶ್ರೀಕೃಷ್ಣನೇ, ಕಂಸವಧಾರ್ಥಾಯ=ಕಂಸನನ್ನು ಕೊಲ್ಲುವುದೆಂಬುವ ಪ್ರಯೋಜನಕ್ಕೋಸ್ಕರವೂ, ಭೂಭಾರೋತ್ತಾರಣಾಯ ಚ=ಭೂಮಿಯ ಭಾರವನ್ನು ಕಳೆಯುವುದಕ್ಕೋಸ್ಕರವೂ, ಪಾಂಡವಾನಾಂ=ಪಾಂಡವರಿಗೆ, ಹಿತಾರ್ಥಾಯ=ಹಿತರೂಪ ಪ್ರಯೋಜನಕ್ಕೋಸ್ಕರವೂ, ಧರ್ಮಸಂಸ್ಥಾಪನಾಯ ಚ=ಸದ್ಧರ್ಮಗಳನ್ನು ಸ್ಥಾಪಿಸುವುದ

★ ಬ್ರಹ್ಮಾದಿಗಳಿಂದಲೂ ಯಾಗಮಾಡಲ್ಪಡತಕ್ಕವನು, ಯಾಗಗಳಿಗೆ ಪಾಲಕನು, ಯಾಗಗಳ ಸತ್ತಾದಿಗಳಿಗೂ ನಿಯಾಮಕನು,ಯಾಗಗಳಿಗೆ ಉತ್ಪಾದಕನೂ ಆದ ಶ್ರೀಕೃಷ್ಣನಿಗೋಸ್ಕರ ನಮಸ್ಕಾರವು.

Scanned by CamScanner

ಕ್ಕೋಸ್ಕರವೂ, ಜಾತಃ=ಅವತರಿಸಿರುವಿ, ದೇವಕ್ಯಾ=ದೇವಕೀದೇವಿಯಿಂದ, ಸಹಿತಃ=ಕೂಡಿದವನಾಗಿ, ತ್ವಂ=ನೀನು, ಮಯಾ=ನನ್ನಿಂದ, ದತ್ತಂ=ಕೊಡಲ್ಪಡತಕ್ಕ, ಅರ್ಘ್ಯಂ=ಅರ್ಘ್ಯವನ್ನು, ಗೃಹಾಣ= ಸ್ವೀಕರಿಸು) ॥ 10 ॥ 11॥

ಮೂಲ ॥ ಕ್ಷೀರೋದಾರ್ಣವಸಂಭೂತ ಅತ್ರಿಗೋ (ನೇ)ತ್ರಸಮುದ್ಭವ ।
ಗೃಹಾಣಾರ್ಘ್ಯಂ ಮಯಾ ದತ್ತಂ (ಶಶಾಂಕೇದಂ) ರೋಹಿಣ್ಯಾ ಸಹಿತಃ ।
ಶಶಿನ್ (ಸಹಿತೋ ಮಮ) ॥ ೧೨ ॥

ಅರ್ಥ ॥ (ಈ ಪ್ರಕಾರ ಶ್ರೀಕೃಷ್ಣನಿಗೆ ಅರ್ಘ್ಯವನ್ನು ಕೊಟ್ಟ ಮೇಲೆ ತುಲಸೀಕಟ್ಟೆಯ ಎದುರಿನಲ್ಲಿ ಚಂದ್ರನಿಗೂ ಅರ್ಘ್ಯವನ್ನು ಕೊಡಬೇಕು.) ಕ್ಷೀರೋದಾರ್ಣವಸಂಭೂತ=ಕ್ಷೀರಸಮುದ್ರದಲ್ಲಿ ಹುಟ್ಟಿದವನೇ, ಅತ್ರಿಗೋತ್ರ ಸಮುದ್ಭವ=ಅತ್ರಿ ಋಷಿಯ ಗೋತ್ರದಲ್ಲಿ ಹುಟ್ಟಿದವನೇ, (ಅತ್ರಿನೇತ್ರ ಸಮುದ್ಭವ=ಅತ್ರಿ ಋಷಿಯ ನೇತ್ರದಿಂದ ಹುಟ್ಟಿದವನೇ) ಶಶಿನ್=ಚಂದ್ರನೇ=(ಶಶಾಂಕ=ಶಶ (ಮೊಲ)ದ ಚಿಹ್ನೆಯಿರುವವನೇ, ರೋಹಿಣ್ಯಾ=ರೋಹಿಣೀ ದೇವಿಯಿಂದ, ಸಹಿತಃ=ಕೂಡಿದವನಾಗಿ, ತ್ವಂ=ನೀನು, ಮಯಾ=ನನ್ನಿಂದ, (ಇದಂ=ಈ) ದತ್ತಂ=ಕೊಡಲ್ಪಡತಕ್ಕ, ಅರ್ಘ್ಯಂ=ಅರ್ಘ್ಯವನ್ನು, ಗೃಹಾಣ=ಸ್ವೀಕರಿಸು. ॥ 12 ॥

ಮೂಲ ॥ ದತ್ವಾರ್ಘ್ಯಂ ಮನುನಾನೇನ ಹ್ಯು(ಉ)ಪಸ್ಥಾಯ ವಿಧುಂ ಬುಧಃ ।
ಶಶಿನೇ ಚಂದ್ರದೇವಾಯ ಸೋಮದೇವಾಯ ಚೇಂದವೇ ॥ ೧೩ ॥

ಮೃಗಿಣೇ ಶೀತಬಿಂಬಾಯ ಲೋಕದೀಪಾಯ ದೀಪಿನೇ ।
ಶೀತದೀಧಿತಿಬಿಂಬಾಯ ತಾರಕಾಪತಯೇ ನಮಃ ॥ ೧೪ ॥

ಅರ್ಥ ॥ ಬುಧಃ=ಜ್ಞಾನಿಯಾದವನು, ವಿಧುಂ=ಚಂದ್ರನನ್ನು, ಉಪಸ್ಥಾಯ ಹಿ=ಆರಾಧಿಸಿಯೇ. ಅನೇನ ಮನುನಾ=ಈ ಹಿಂದೆ ಹೇಳಿದ ಮಂತ್ರದಿಂದಲೇ, ಅರ್ಘ್ಯಂ=ಅರ್ಘ್ಯವನ್ನು, ದತ್ವಾ=ಕೊಟ್ಟು, (ಪ್ರಾರ್ಥಿಸತಕ್ಕುದು) ಮೃಗಿಣೇ=ಮೃಗಚಿಹ್ನೆಯುಳ್ಳವನೂ, ಶೀತಬಿಂಬಾಯ=ಶೀತಲವಾದ ಮಂಡಲ ವುಳ್ಳವನೂ, ಲೋಕದೀಪಾಯ=ಲೋಕಗಳನ್ನು ಪ್ರಕಾಶಪಡಿಸುವವನೂ, ದೀಪಿನೇ=ಪ್ರಕಾಶ ಸ್ವರೂಪನೂ, ಶೀತದೀಧಿತಿಬಿಂಬಾಯ=ಶೀತಗಳಾದ ಕಿರಣಗಳುಳ್ಳ ಮಂಡಲವುಳ್ಳವನೂ, ತಾರಕಾಪತಯೇ=ನಕ್ಷತ್ರಗಳಿಗೆ ಅಧಿಪತಿಯೂ, ಶಶಿನೇ=ಮೊಲವನ್ನು ಧರಿಸಿದವನೂ, ಚಂದ್ರದೇವಾಯ=ಆಹ್ಲಾದಕರನಾದ ದೇವನೂ, ಸೋಮದೇವಾಯ ಚ=ಅಮೃತವನ್ನು ಸುರಿಸುವ ದೇವನೂ ಆದ, ಇಂದವೇ=ಚಂದ್ರನಾದ ನಿನಗೋಸ್ಕರ, ನಮಃ=ನಮಸ್ಕಾರವು. ॥ 13 ॥ 14 ॥

ಮೂಲ ॥ ಉಪಸಂಹೃತ್ಯ ತತ್ಸರ್ವಂ ಬ್ರಹ್ಮಚಾರೀ ಜಿತೇಂದ್ರಿಯಃ ।
ವಿಶ್ವಾಯೇತಿ ಚ ಮಂತ್ರೇಣ ತತಃ ಸ್ವಾಪಂ ಸಮಾಚರೇತ್ ॥ ೧೫ ॥

ತತೋ ನಿತ್ಯಾಹ್ನಿಕಂ ಕೃತ್ವಾ ಶಕ್ತಿತೋ ದೀಯತಾಂ ಧನಂ ।
ಸರ್ವಾಯೇತಿ ಚ ಮಂತ್ರೇಣ ತತಃ ಪಾರಣಮಾಚರೇತ್ ॥ ೧೬ ॥
ಧರ್ಮಾಯೇತಿ ತತಃ ಸ್ವಸ್ಥೋಮುಚ್ಯತೇ ಸರ್ವಕಿಲ್ಬಿಷೈಃ ॥ ೧೭ ॥

Scanned by CamScanner

ಅರ್ಥ ॥ ತತ್ಸರ್ವಂ=ಅವೆಲ್ಲವನ್ನೂ, (ಪೂಜಾದಿಗಳನ್ನು) ಉಪಸಂಹೃತ್ಯ=ಉಪಸಂಹಾರಮಾಡಿ (ಸಮಾಪಿಸಿ) ಬ್ರಹ್ಮಚಾರೀ=ಬ್ರಹ್ಮಚರ್ಯ ವ್ರತವುಳ್ಳವನಾಗಿ, ಜಿತೇಂದ್ರಿಯಃ=ಸರ್ವೇಂದ್ರಿಯಗಳನ್ನೂ ನಿಗ್ರಹಿಸಿದವನಾಗಿ, (ಇಂದ್ರಿಯಗಳಿಗೆ ವಶನಾಗದೆ ಶ್ರೀಕೃಷ್ಣನನ್ನೇ ಚಿಂತಿಸಿಕೊಂಡು,) ತತಃ=ಆ ಮೇಲೆ, ವಿಶ್ವಾಯೇತಿ ಚ ಮಂತ್ರೇಣ='ವಿಶ್ವಾಯ ವಿಶ್ವಪತಯೇ ವಿಶ್ವೇಶ್ವರಾಯ ವಿಶ್ವಸಂಭವಾಯ ಶ್ರೀಗೋವಿಂದಾಯ ನಮೋ ನಮಃ' ಎಂಬ ಮಂತ್ರದಿಂದ (ಈ ಮಂತ್ರವನ್ನುಚ್ಚರಿಸುತ್ತಾ) ಸ್ವಾಪಂ=ನಿದ್ರೆಯನ್ನು, ಸಮಾಚರೇತ್=ಮಾಡಬೇಕು. ತತಃ=ಆಮೇಲೆ, ಬೆಳಗಿನ ಜಾಮದಲ್ಲಿ ಎದ್ದು ಮುಖಪ್ರಕ್ಷಾಲನ ಸ್ನಾನಾದಿಗಳನ್ನು ಮಾಡಿದ ಮೇಲೆ, ನಿತ್ಯಾಹ್ನಿಕಂ=ಸಂಧ್ಯಾವಂದನ ಜಪ ತರ್ಪಣ ಪೂಜಾದಿಗಳನ್ನು, ಕೃತ್ವಾ=ಮಾಡಿ, ಶಕ್ತಿತಃ=ತಮ್ಮ ತಮ್ಮ ಶಕ್ತ್ಯನುಸಾರವಾಗಿ, ಧನಂ=ದಕ್ಷಿಣಾದಿಗಳು, ದೀಯತಾಂ=(ಭಕ್ತರಿಂದ) ದಾನಮಾಡಲ್ಪಡಬೇಕು, ತತಃ=ಆಮೇಲೆ, ಬ್ರಾಹ್ಮಣರಿಗೆ ಭೋಜನಾದಿಗಳನ್ನು ಮಾಡಿಸಿದಮೇಲೆ, ಸರ್ವಾಯೇತಿ ಚ ಮಂತ್ರೇಣ='ಸರ್ವಾಯ ಸರ್ವಪತಯೇ ಸರ್ವೇಶ್ವರಾಯ ಸರ್ವಸಂಭವಾಯ ಶ್ರೀಗೋವಿಂದಾಯ ನಮೋ ನಮಃ' ಎಂಬ ಮಂತ್ರದಿಂದ, ಪಾರಣಂ= ಭೋಜನವನ್ನು, ಆಚರೇತ್=ಮಾಡಬೇಕು. ತತಃ=ಆಮೇಲೆ, ಧರ್ಮಾಯೇತಿ= 'ಧರ್ಮಾಯ ಧರ್ಮಪತಯೇ ಧರ್ಮೇಶ್ವರಾಯ ಧರ್ಮಸಂಭವಾಯ ಶ್ರೀಗೋವಿಂದಾಯ ನಮೋ ನಮಃ' ಎಂಬ ಮಂತ್ರದಿಂದ, ಸ್ವಸ್ಥಃ=ಸ್ವಸ್ಥಚಿತ್ತನೂ, (ಅಂದರೆ ಇತರತ್ರ ಮನಸ್ಸು ಇಡದೆ ಶ್ರೀಕೃಷ್ಣನನ್ನೇ ಧ್ಯಾನಿಸುತ್ತಾ ಇದ್ದವನಾಗಿ ಕೃಷ್ಣಾರ್ಪಣ ಬಿಟ್ಟು) ಸರ್ವಕಿಲ್ಬಿಷೈಃ=ಎಲ್ಲಾ ಪಾಪಗಳಿಂದಲೂ, ಮುಚ್ಯತೇ=ಬಿಡಲ್ಪಡುತ್ತಾನೆ. ಸಂಪೂರ್ಣ ದುಃಖಗಳು ನಿವೃತ್ತಗಳಾಗಿ ಸ್ವರೂಪಾನಂದಾವಿರ್ಭಾವ ರೂಪವಾದ ಮುಕ್ತಿಯನ್ನು ಕ್ರಮದಿಂದ ಹೊಂದುವರು. ॥ 15 ॥ 16 ॥ 17 ॥

ತಾತ್ಪರ್ಯ ॥ (1) ಮಾಧ್ವರಲ್ಲಿ ಕೆಲವರು (ಮಠತ್ರಯದವರು) ಶ್ರಾವಣಮಾಸದ ಕೃಷ್ಣಪಕ್ಷದ ಅಷ್ಟಮಿಯನ್ನು ಜನ್ಮಾಷ್ಟಮಿಯೆಂದಂಗೀಕರಿಸಿರುವರು. ಈ ವಿಷಯದಲ್ಲಿ ಅನೇಕ ಪ್ರಮಾಣಗಳಿವೆ. '' ಶ್ರಾವಣೇ ಬಹುಲೇ ಪಕ್ಷೇ ಕೃಷ್ಣ ಜನ್ಮಾಷ್ಟಮೀ ವ್ರತಂ । ನ ಕರೋತಿ ನರೋ ಯಸ್ತು ಭವತಿ ಕ್ರೂರರಾಕ್ಷಸಃ ॥ ಕೃಷ್ಣಾಷ್ಟಮೀ ದಿನೇ ಪ್ರಾಪ್ತೇ ಯೇನ ಭುಕ್ತಂ ದ್ವಿಜೋತ್ತಮ । ತ್ರೈಲೋಕ್ಯಸಂಭವಂ ಪಾಪಂ ತೇನ ಭುಕ್ತಂ ನ ಸಂಶಯಃ ''॥ ಶ್ರಾವಣ ಮಾಸದ ಕೃಷ್ಣಪಕ್ಷದಲ್ಲಿ ಕೃಷ್ಣಜನ್ಮಾಷ್ಟಮಿ ವ್ರತವನ್ನು ಯಾರು ಮಾಡುವುದಿಲ್ಲವೋ, ಅವರು ಕ್ರೂರರಾಕ್ಷಸರು ಆಗುತ್ತಾರೆ. ಆ ದಿವಸದಲ್ಲಿ ಯಾರು ಭೋಜನಮಾಡುತ್ತಾರೋ ಅಂತಹವರಿಗೆ ಮೂರು ಲೋಕಗಳಲ್ಲಿ ಮಾಡಿದ ಪಾಪವೂ ಸಂಭವಿಸುತ್ತದೆ; ಇತ್ಯಾದ್ಯನೇಕ ಪ್ರಮಾಣಗಳು ಇರುವುದರಿಂದ ಶ್ರಾವಣ ಕೃಷ್ಣಾಷ್ಟಮಿಯಲ್ಲಿ ಜನ್ಮಾಷ್ಟಮೀ ವ್ರತವನ್ನಾಚರಿಸುವರು. 'ಯಸ್ಮಿನ್ನಬ್ದೇ ಭಾದ್ರಪದೇಽಥಮಾಸೇ' ಎಂದು ಶ್ರೀಮದಾಚಾರ್ಯರು ಹೇಳಿದ್ದಾಗ್ಯೂ ಪೂರ್ಣಿಮಾಂತಮಾಸವನ್ನು ಇಟ್ಟುಕೊಂಡರೆ ಭಾದ್ರಪದ ಮಾಸವೆಂದು ಹೇಳಿದ್ದೂ ಯುಕ್ತವಾಗುವುದು, ಅಂತೂ ಆಚಾರ್ಯರು ಪೂರ್ಣಿಮಾಂತ ಮಾಸವನ್ನು ಇಟ್ಟುಕೊಂಡು ಹೇಳಿದ್ದಾಗಿರುತ್ತದೆ. ಆದಕಾರಣ ಪರಸ್ಪರ ವಿರೋಧವಿಲ್ಲವು ಎಂದು ಉಪಪತ್ತಿಮಾಡಿಕೊಂಡು ಶ್ರಾವಣ ಬಹುಳದಲ್ಲಿಯೇ ಜನ್ಮಾಷ್ಟಮಿಯನ್ನಾಚರಿಸುವರು.

(2) ಇನ್ನು ಕೆಲವರು (ತೌಳವರಲ್ಲಿರುವ ಮಾಧ್ವಮತದವರೆಲ್ಲರೂ) ಸಿಂಹಮಾಸದ ಕೃಷ್ಣಪಕ್ಷದ ಅಷ್ಟಮಿಯನ್ನು ಜನ್ಮಾಷ್ಟಮಿಯೆಂದುಪಪಾದಿಸುತ್ತಾ ಆಚರಿಸುತ್ತಾರೆ. ಏಕೆಂದರೆ- ''ತಥಾ ಭಾದ್ರಪದೇ ಮಾಸಿ ಕೃಷ್ಣಾಷ್ಟಮ್ಯಾಂ ಕಲೌಯುಗೇ । ಅಷ್ಟಾವಿಂಶತಿಮೇ ಜಾತಃ ಕೃಷ್ಣೋಽಸೌ ದೇವಕೀಸುತಃ''॥

Scanned by CamScanner

ಭಾದ್ರಪದಮಾಸದಲ್ಲಿ 28ನೇ ಕಲಿಯುಗದಲ್ಲಿ ಕೃಷ್ಣಪಕ್ಷದ ಅಷ್ಟಮಿಯಲ್ಲಿ ಕೃಷ್ಣನು ಅವತರಿಸಿರುವನು, ಎಂದು ಬ್ರಾಹ್ಮಪುರಾಣದಲ್ಲಿದೆ. ಹೀಗೆಯೇ ಅನೇಕ ಪ್ರಮಾಣಗಳು ಸಾರುತ್ತಿವೆ. ಮತ್ತು ಶ್ರೀಮದಾಚಾರ್ಯರು ತಾತ್ಪರ್ಯನಿರ್ಣಯದಲ್ಲಿ ''ಯಸ್ಮಿನ್ನಬ್ದೇ ಭಾದ್ರಪದೇಽಥಮಾಸ ಸಿಂಹಸ್ಥಯೋರ್ಗುರುರವ್ಯೋಃ ಪರೇಶಃ । ಉದೈತ್''॥ ಎಂದು ಹೇಳಿರುವರು. ಇದಕ್ಕೆ ಭಾವಿಸಮೀರ ಶ್ರೀಮದ್ವಾದಿರಾಜ ಶ್ರೀಮಚ್ಚರಣರು ''ಯಸ್ಮಿನ್ ಸಂವತ್ಸರೇ ಅಧಿಮಾಸಪ್ರಾಪ್ತೌ ಸತ್ಯಾಂ ಭಾದ್ರಪದೇ ಮಾಸಿ ರವಿಃ ಸಿಂಹರಾಶಿಂ ಗತೋ ಭವತಿ'' ಇತ್ಯಾದಿ, ಯಾವ ಸಂವತ್ಸರದಲ್ಲಿ ಅಧಿಕಮಾಸವು ಪ್ರಾಪ್ತಿಯಾಗಲು ಭಾದ್ರಪದಮಾಸದಲ್ಲಿ ಸೂರ್ಯನು ಸಿಂಹರಾಶಿಯಲ್ಲಿ ಹೋಗುವನೋ, ಕೃಷ್ಣಾವತಾರ ಸಮಯದಲ್ಲಿ ಬೃಹಸ್ಪತ್ಯಾಚಾರ್ಯರೂ ಕೂಡ ಸಿಂಹರಾಶಿಯಲ್ಲಿದ್ದರು. ಆಗ ದರ್ಶಮಾಸರೀತಿಯಾಗಿ ಭಾದ್ರಪದ ಮಾಸವೂ ಸೌರಮಾಸರೀತಿಯಾಗಿ ಶ್ರಾವಣಮಾಸವೂ ಅಂದರೆ ಸಿಂಹಮಾಸವೂ ಆಗುವುದು. ಆ ಸಂವತ್ಸರದಲ್ಲಿ ಕೃಷ್ಣಾವತಾರವು ಎಂಬ ಅಭಿಪ್ರಾಯದಿಂದ 'ಯಸ್ಮಿನ್ನಬ್ದೇ' ಎಂದು ಹೇಳಿರುವರು. ಹೀಗೆ ದ್ವಿವಿಧಮಾಸದ ಯೋಗವು ಆಗಿಂದಾಗ್ಗೆ ಸಂಭವಿಸುವುದು. ಸರ್ವದಾ ಸಂಭವಿಸಲಾರದು, ಇಂತಹ ಯೋಗವು ಸಿಗದಿದ್ದರೆ ಕೇವಲ ಸಿಂಹಮಾಸದಲ್ಲಿಯೂ ಮಾಡಲ್ಪಡುತ್ತದೆ, ಎಂದು ವ್ಯಾಖ್ಯಾನಮಾಡಿರುವರು. ಆದಕಾರಣ ಸಿಂಹ ಬಹುಳ ಅಷ್ಟಮಿಯೇ ಜನ್ಮಾಷ್ಟಮಿಯು. ಭಾದ್ರಮಾಸಯೋಗವಿದ್ದರೆ ಪ್ರಶಸ್ತವು, ಬಹುಪ್ರಮಾಣಗಳಲ್ಲಿ ತೋರುವ ಶ್ರಾವಣಶಬ್ದವು ಸಿಂಹಪರವೆಂದೂ ಹೇಳುವರು. (3) ಇಂತಹ ಅಷ್ಟಮಿಯು 2 ವಿಧವು. 1 ಕೇವಲ ಜನ್ಮಾಷ್ಟಮಿಯು, 2ನೇದ್ದು 'ಜಯಂತೀ' ಇವುಗಳಲ್ಲಿ ಶ್ರೀಮದಾಚಾರ್ಯರು ಜಯಂತೀನಿರ್ಣಯವನ್ನು ಮಾಡಿರುವರು. ಕೃಷ್ಣಜನ್ಮಾಷ್ಟಮಿಯೇ ಅರ್ಧರಾತ್ರಿಯಲ್ಲಿ ರೋಹಿಣೀ ನಕ್ಷತ್ರದಿಂದೊಡಗೂಡಿರುವ ಪಕ್ಷದಲ್ಲಿ 'ಜಯಂತೀ,' ಎನ್ನಿಸುತ್ತದೆ. ಇದು ಮಾಡದೆ ಇದ್ದರೆ ಪ್ರತ್ಯವಾಯವೂ ಮಾಡಿದರೆ ಫಲವಿಶೇಷವೂ ಶ್ರುತವಾದುದರಿಂದ ನಿತ್ಯಕಾಮ್ಯವೆನ್ನಿಸುತ್ತದೆ. ''ಅಷ್ಟಮೀ ಕೃಷ್ಣಪಕ್ಷಸ್ಯ ರೋಹಿಣೀ ಋಕ್ಷಸಂಯುತಾ। ಭವೇತ್ ಪ್ರೌಷ್ಠಪದೇ ಮಾಸಿ ಜಯಂತೀ ನಾಮ ಸಾ ಸ್ಮೃತಾ''॥ ಭಾದ್ರಪದ ಮಾಸದಲ್ಲಿ ಕೃಷ್ಣಪಕ್ಷದ ಅಷ್ಟಮಿಯು ರೋಹಿಣೀ ನಕ್ಷತ್ರದಿಂದೊಡಗೂಡಿದರೆ 'ಜಯಂತೀ' ಎನ್ನಿಸುತ್ತದೆ. ಎಂದು ವಿಷ್ಣುರಹಸ್ಯಾದಿಗಳಲ್ಲಿರುವುದರಿಂದ ಜನ್ಮಾಷ್ಟಮಿಯೇ ರೋಹಿಣೀ ನಕ್ಷತ್ರದಿಂದ ಯುಕ್ತವಾದರೆ 'ಜಯಂತೀ' ಎನ್ನಿಸುತ್ತದೆ. ''ಅಷ್ಟಮೀ ರೋಹಿಣೀಯುಕ್ತಾ ನಿಶ್ಯರ್ಧೇ ದೃಶ್ಯತೇ ಯದಾ। ಮುಖ್ಯಕಾಲಸ್ಸ ವಿಜ್ಞೇಯಸ್ತತ್ರ ಜಾತೋ ಹರಿಃ ಸ್ವಯಂ''॥ ಹಗಲುರಾತ್ರಿ ರೋಹಿಣೀ ಯೋಗವಿದ್ದರೆ ಅದು ಮುಖ್ಯಕಾಲವು. ''ಅರ್ಧರಾತ್ರೇ ತು ಯೋಗೋಽಯಂ ತಾರಾಪತ್ಯುದಯೇ ಸತಿ । ನಿಯತಾತ್ಮಾ ಶುಚಿಃಸ್ನಾತಃ ಪೂಜಾಂ ತತ್ರ ಪ್ರವರ್ತಯೇತ್ '' ॥ ಅರ್ಧರಾತ್ರಿಕಾಲದಲ್ಲಿ ಚಂದ್ರೋದಯವಾಗುವಾಗ ಸ್ನಾನಾದಿಗಳನ್ನು ಮಾಡಿ ಪೂಜೆಯನ್ನು ಮಾಡಬೇಕು. ಎಂದು ವಿಷ್ಣುಧರ್ಮದಲ್ಲಿ ಹೇಳಿರುತ್ತದೆ. (4) ''ವಾಸರೇ ವಾ ನಿಶಾಯಾಂ ವಾ ಯತ್ರ ಸ್ವಲ್ಪಾಽಪಿ ರೋಹಿಣೀ । ವಿಶೇಷೇಣ ನಭೋ ಮಾಸೇ ಸೈವೋಪೋಷ್ಯಾ ಮನೀಷಿಭಿಃ'' ಎಂದು ವಸಿಷ್ಠ ಸ್ಮೃತಿಯಿದ್ದುದರಿಂದ ಆ ದಿನವೂ ಮುಖ್ಯವಾಗಿಯೇ ಉಪವಾಸಮಾಡಬೇಕು. (5) ''ಕೃಷ್ಣಾಷ್ಟಮ್ಯಾಂ ಭವೇದ್ಯತ್ರ ಕಲೈಕಾ ರೋಹಿಣೀ ನೃಪ । ಜಯಂತೀ ನಾಮ ಸಾ ಜ್ಞೇಯಾ ಉಪೋಷ್ಯಾ ಸಾ ಪ್ರಯತ್ನತಃ ''। ಎಂದಿರುವುದರಿಂದ ರಾತ್ರಿಯಲ್ಲಿ ಮಾತ್ರ ರೋಹಿಣೀಯೋಗವಿದ್ದರೆ ಮಧ್ಯಮವೆಂದೂ ಹಗಲಿನಲ್ಲಿ ಮಾತ್ರವಿದ್ದರೆ ಅಧಮವೆಂದೂ ತಿಳಿಯಬೇಕು. (6) ಜನ್ಮಾಷ್ಟಮೀದಿನ ಸರ್ವರೂ ಉಪವಾಸ ಮಾಡಬೇಕೆಂದು ಶಿವಪುರಾಣದಲ್ಲಿಯೂ ಹೇಳಿರುತ್ತದೆ. ''ವಿಹಿತಃ ಸರ್ವಜಾತೀನಾಮು-

Scanned by CamScanner

ಪ್ರೋಷಣವಿಧಿಃ ಪರಃ'' ಎಂದು. ''ವಾಲಖಿಲ್ಯಾದಿಭಿರ್ವಿಪ್ರೈ ಸನಕಾದ್ಯೈರ್ಮುನೀಶ್ವರೈಃ। ಕೃತಂ ಧರ್ಮವಿವೃದ್ಧ್ಯರ್ಥಂ ಜಯಂತೀ ಸಮುಪೋಷಣಂ'' ॥ ಎಂದು ಭವಿಷ್ಯೋತ್ತರದಲ್ಲಿ, ಅಂದರೆ ವಾಲಖಿಲ್ಯ ಮೊದಲಾದ ಬ್ರಾಹ್ಮಣರು, ಸನಕಾದಿ ಋಷಿಗಳು ಎಲ್ಲರೂ ಧರ್ಮವು ಅಭಿವೃದ್ಧಿಯಾಗುವುದಕ್ಕಾಗಿ ಜಯಂತಿಯಲ್ಲಿ ಉಪವಾಸಮಾಡುತ್ತಿರುವರು. ''ದ್ವಿಜಾತಿಭಿರ್ವಿಶೇಷೇಣ ತದ್ಭಕ್ತೈಶ್ಚ ವಿಧಾನತಃ'' ॥ ಬ್ರಾಹ್ಮಣರು ವಿಶೇಷತಃ ಮಾಡಬೇಕು. ವಿಷ್ಣುವಿನ ಭಕ್ತರು ವಿಶೇಷತಃ ವಿಧಿ ಪ್ರಕಾರ ಉಪವಾಸಮಾಡಬೇಕು. ಎಂದು ವಿಷ್ಣುತೀರ್ಥೀಯದಲ್ಲಿದೆ. ಅಲ್ಲದೆ ಕ್ಷತ್ರಿಯರ ವಿಷಯದಲ್ಲಿ ಭವಿಷ್ಯೋತ್ತರದಲ್ಲಿ ''ಅಂಬರೀಷೇಣ ಶೂರೇಣ ಧುಂಧುಮಾರೇಣ ಗಾಧಿನಾ। ಸಗರೇಣ ಕಕುತ್ಸ್ಥೇನ ದಿಲೀಪೇನ ಮಹಾತ್ಮನಾ । ಮಾಂಧಾತ್ರಾ ಚ ಸುಹೋತ್ರೇಣ ಜನಕೇನ ಯಶಸ್ವಿನಾ । ಶತಧನ್ವನಾ ಜಯಂತೇನೋತ್ತರೇಣ ಸುಮಂತುನಾ ॥ ಏತೈರನ್ಯೈಶ್ಚ ರಾಜೇಂದ್ರೈರ್ಧರ್ಮಜ್ಞೈಃ ಸತ್ಯವಾದಿಭಿಃ । ತುಷ್ಟ್ಯರ್ಥಂ ದೇವಕೀ ಸೂನೋರ್ಜಯಂತೀ ಸಮುಪೋಷಿತಾ'' ॥ ಅಂಬರೀಷಾದಿ ರಾಜರೂ ಶ್ರೀಕೃಷ್ಣನಿಗೆ ತುಷ್ಟಿಯಾಗುವುದಕ್ಕಾಗಿ ಜಯಂತೀದಿನ ಉಪವಾಸಮಾಡಿರುವರು.

(7) ಸ್ತ್ರೀಯರ ವಿಷಯದಲ್ಲಿ ಭವಿಷ್ಯೋತ್ತರದಲ್ಲಿ ''ವರ್ಷೇ ವರ್ಷೇ ತು ಯಾ ನಾರೀ ಕೃಷ್ಣಜನ್ಮಾಷ್ಟಮೀ ವ್ರತಂ । ನ ಕರೋತಿ ಮಹಾಭಾಗ ವ್ಯಾಲೀಭವತಿ ಕಾನನೇ'' ಯಾವ ಸ್ತ್ರೀಯರು ಪ್ರತಿವರ್ಷವೂ ಕೃಷ್ಣಜನ್ಮಾಷ್ಟಮೀ ವ್ರತವನ್ನು ಮಾಡುವುದಿಲ್ಲವೋ ಅವರು ಸರ್ಪರಾಗಿ ಹುಟ್ಟುತ್ತಾರೆ.

(8) ಬ್ರಹ್ಮಾ॥ ''ಶೃಣು ವತ್ಸ ಪ್ರವಕ್ಷ್ಯಾಮಿ ಪ್ರಭಾವಂ ಚಾಷ್ಟಮೀ ವ್ರತೇ । ಜಯಂ ಪುಣ್ಯಸ್ಯ ಕುರುತೇ ಕ್ಷಯಂ ಪಾಪಸ್ಯ ಕರ್ಮಣಃ ॥ ಸ್ಮರಣಾತ್ ಕೀರ್ತನಾತ್ಪಾಪಂ ಸಪ್ತಜನ್ಮಾರ್ಜಿತಂ ಮುನೇ । ಜಯಂತೀ ದಹತೇ ಪಾಪಂ ಕಿಂ ಪುನಶ್ಚೋಪವಾಸಿನಾಂ ॥'' ಬ್ರಹ್ಮನು ನಾರದನ ಹತ್ತಿರ ಹೇಳುವನು. ಅಷ್ಟಮೀ ವ್ರತದ ಪ್ರಭಾವವನ್ನು ಕೇಳು. ಹೇಳುವೆನು. ಪುಣ್ಯಾಭಿವೃದ್ಧಿಯೂ ಪಾಪಗಳಿಗೆ ನಾಶವೂ ಆಗುವುದು; ಸ್ಮರಣಸಂಕೀರ್ತನೆಗಳನ್ನು ಮಾಡೋಣದರಿಂದಲೇ ಏಳು ಜನ್ಮಗಳಲ್ಲಿ ಆರ್ಜಿತವಾದ ಪಾಪವನ್ನು ಜಯಂತಿಯು ಸುಟ್ಟುಬಿಡುತ್ತದೆ; ಉಪವಾಸಮಾಡಿದವರ ಪಾಪವು ನಾಶವಾಗುತ್ತದೆಂದು ಏನು ಹೇಳಬೇಕಾಗಿದೆ? ಆದಕಾರಣ ಸರ್ವರೂ ಉಪವಾಸ ಮಾಡಲೇಬೇಕು.

(9) ತಥಾ ಚ ಶ್ರಾವಣ ಬಹುಳ ಅಷ್ಟಮಿಯು ಅಥವಾ ಸಿಂಹ ಬಹುಳ ಅಷ್ಟಮಿಯು ಜನ್ಮಾಷ್ಟಮಿಯೆಂದೂ ರೋಹಿಣೀ ನಕ್ಷತ್ರದಿಂದೊಡಗೂಡಿದರೆ 'ಜಯಂತೀ' ಎಂದೂ ಪ್ರಸಿದ್ಧವಾಯಿತು. ಈ ನಿತ್ಯ ಮತ್ತು ನಿತ್ಯಕಾಮ್ಯಗಳಾದ 2 ವ್ರತಗಳನ್ನು ಸರ್ವರೂ ಮಾಡಬೇಕು. ಭಕ್ತರಂತೂ ಮಾಡಲೇಬೇಕು. ಹಿಂದೆ ಹೇಳಿದ ರೀತಿಯಾಗಿ ಮಹಾಭಕ್ತಿಪುರಸ್ಸರವಾಗಿ ಮಾಡಿದರೆ ಐಹಿಕದಲ್ಲಿಯೂ ಸುಖಿಗಳಾಗಿಯೇ ಇದ್ದು ಮೋಕ್ಷಾದಿಪುರುಷಾರ್ಥಗಳನ್ನು ಹೊಂದುವರು. ॥ 15 ॥ 16 ॥ 17 ॥

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯವಿರಚಿತೋ ಜಯಂತೀನಿರ್ಣಯಃ ಸಂಪೂರ್ಣಃ ॥ ಶ್ರೀಃ ॥

ಈ ಪ್ರಕಾರ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ನಿರ್ಮಿತವಾದ ಜಯಂತೀನಿರ್ಣಯವು ಸಮಾಪ್ತವಾಯಿತು. ॥ ಶ್ರೀಃ ॥

Scanned by CamScanner

ಸಂಕೀರ್ಣ ಗ್ರಂಥಗಳು

ಶ್ರೀಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ

ಶ್ರೀಶ್ರೀಪಾದರಾಜ ಮಠ, ಮುಳಬಾಗಿಲು

Scanned by CamScanner